ಪಡೆಯುತ್ತಿದ್ದ ಬಗೆ. ಮುದುಕನ ಬಗ್ಗೆ ಅನುಕಂಪ ಮೂಡಿತಾದರೂ ಏನೂ ಮಾಡುವ ಸ್ಥಿತಿಯಲ್ಲಿ ನಾನು ಇರಲಿಲ್ಲ. ಮೊದಲ ಭಾರಿ ಸದ್ದು ಕೇಳಿ ಎಚ್ಚರಗೊಂಡಾಗಿನಿಂದ ಈ ವರೆಗೂ ಮುದುಕ ಆತಂಕದಿಂದ ನೆಮ್ಮದಿ ಕೆಡಿಸಿಕೊಂಡಿದ್ದಾನೆಂದು ನನಗೆ ಚೆನ್ನಾಗಿ ಗೊತ್ತು. "ಎಲ್ಲೋ ಹೊಗೆ ಗೂಡಿನಲ್ಲಿ ನುಗ್ಗಿದ ಗಾಳಿ ಇರಬೇಕು." "ಇಲಿ ಇರಬೇಕು," ಇತ್ಯಾದಿ ಸಮಜಾಯಿಷಿಗಳನ್ನು ಕೊಟ್ಟು ಸಮಧಾನಪಡಲು ಯತ್ನಿಸಿದರೂ ಸಾಧ್ಯವಾಗದೆ ವಿವಶನಾಗಿರುವುದನ್ನು ನಾನು ಅಂದಾಜಿಸಬಲ್ಲೆ.

ಪಾಪ, ಅವನನ್ನು ಬೆನ್ನತ್ತಿದ್ದ ಸಾವಿನ ದಟ್ಟ ಕಪ್ಪು ನೆರಳು ಅವನನ್ನು ದಟ್ಟವಾಗಿ ಸುತ್ತುವರೆದಿರುವುದು ಅವನಿಗೆ ಕಾಣಿಸತೊಡಗಿತ್ತು. ಬಹುಶಃ, ಇದೇ ಸಾವಿನ ಮುನ್ಸೂಚನೆ ಅವನಿಗೆ ಕೋಣೆಯೊಳಗಿನ ನನ್ನ ಇರುವಿನ ಸುಳಿವು ನೀಡಿತ್ತು.

ಎಷ್ಟು ಹೊತ್ತಾದರೂ ಅವನು ಮತ್ತೆ ನಿದ್ದೆ ಹೋಗದೆ ಹಾಗೇ ಕುಳಿತಿರುವುದನ್ನು ಕಂಡು ನಾನು ಮುಚ್ಚಿದ್ದ ಲಾಟೀನನ್ನು ಸ್ವಲ್ಪ ಸ್ವಲ್ಪವೇ ಬಿಡಿಸಲು ನಿರ್ಧರಿಸಿ, ಸ್ವಲ್ಪ ಸ್ವಲ್ಪವೇ, ಬಹಳ ಜಾಗರೂಕತೆಯಿಂದ ತೆರೆಯತೊಡಗಿದೆ... ಕೊನೆಗೂ ಒಂದು ಜೇಡನ ಬಲೆಯ ಗಾತ್ರದ ಮಂದ ಬೆಳಕಿನ ಕಡ್ಡಿಯೊಂದು ಲಾಟೀನಿನಿಂದ ಬಿಡುಗಡೆ ಹೊಂದಿ ಅವನ ವಿಲಕ್ಷಣ ಹದ್ದಿನ ಕಣ್ಣಿ ಮೇಲೆ ಬಿದ್ದಿತು.

ಅದು ಆ ವಿಲಕ್ಷಣ ಹದ್ದಿನ ಕಣ್ಣು ದೊಡ್ಡದಾಗಿ ತೆರೆದೇ ಇತ್ತು. ಅದನ್ನು ನಾನು ತುಂಬಾ ಸೂಕ್ಷ್ಮವಾಗಿ ಗಮನಿಸಿದೆ. ಪೊರೆ ಆವರಿಸಿದ ಆ ಮಂದ ನೀಲಿ ಬಣ್ಣದ ಕಣ್ಣು ನನ್ನ ಬೆನ್ನಹುರಿಯಲ್ಲಿ ಮಂಜುಗಡ್ಡೆ ಹರಿಸಿದಂತಾಯಿತು. ನನಗೆ ಮುದುಕನ ಮುಖವಾಗಲೀ ಅವನ ಆಕೃತಿಯಾಗಲೀ ಕಾಣಿಸಲೇ ಇಲ್ಲ. ಅದು ಹೇಗೋ, ನನ್ನ ಲಾಟೀನಿನ ಬೆಳಕು ಅವನ ದರಿದ್ರ ಕಣ್ಣುಗಳ ಮೇಲೆ ಬೀಳುವಂತೆ ಯಾವುದೋ ಅಗೋಚರ ಶಕ್ತಿ ನನ್ನ ಕೈಯನ್ನು ನಿರ್ದೇಶಿಸಿತ್ತು.

ನೀವೆಲ್ಲಾ ಹುಚ್ಚು ಎಂದು ಹೇಳುತ್ತಿರುವುದು ನನ್ನ ಉತ್ಕಟ ಗ್ರಹಣಶಕ್ತಿಯ ಕುರಿತಾಗಿ ಎಂದು ನಾನು ಈ ಮೊದಲೇ ಹೇಳಿದ್ದೇನೆ. ನಾನು ಹೇಳುತ್ತಿರುವುದು, ನನಗೀಗ ಕೇಳಿಸುತ್ತಿರುವ ಮಂದ, ಅಸ್ಪಷ್ಟ ಶಬ್ದಗಳ ಕುರಿತಾಗಿ. ಟಿಕ್, ಟಕ್, ಟಿಕ್ ಟಕ್... ಬಟ್ಟೆಯಲ್ಲಿ ಸುತ್ತಿಟ್ಟ ಗಡಿಯಾರ ಹೊಡೆದು ಕೊಳ್ಳುತ್ತಿರುವಂತೆ! ಈ ಶಬ್ದ ನನಗೆ ತೀರಾ ಪರಿಚಿತ. ಅದು ಬಡಿದುಕೊಳ್ಳುತ್ತಿರುವ ಮುದುಕನ ಹೃದಯ! ನಗಾರಿಯ ಸದ್ದು ಸೈನಿಕನ ಆವೇಶವನ್ನು ಹೆಚ್ಚಿಸಿದಂತೆ, ಅದು ನನ್ನ ರೋಷವನ್ನೂ ಹೆಚ್ಚಿಸಿತು.

ಆದರೂ ನಾನು ಸಂಯಮದಿಂದ ಕಲ್ಲಾಗಿ ಉಸಿರಾಡುವುದನ್ನೇ ಮರೆತಂತೆ ಲಾಟೀನನ್ನು ಹಿಡಿದುಕೊಂಡು ಸುಮ್ಮನೆ ನಿಂತುಕೊಂಡೇ ಇದ್ದೆ. ಲಾಟೀನಿನ ಬೆಳಕಿನ ಕಡ್ಡಿಯನ್ನು ಮುದುಕನ ನೀಲಿ ಕಣ್ಣಿನ ಮೇಲೆ ಹಿಡಿದಿಡುವುದೇ ನನ್ನ ಧ್ಯೇಯವೆಂಬಂತೆ. ಕ್ರಮೇಣ ಮುದುಕನ ಹೃದಯದ ಸದ್ದು ಜೋರು ಜೋರಾಗಿ ಕೇಳಿಸಹತ್ತಿತು. ಮುದುಕ ಖಂಡಿತವಾಗಿಯೂ ವಿಪರೀತ ಭಯಭ್ರಾಂತನಾಗಿದ್ದಾನೆಂಬುದರಲ್ಲಿ ಸಂಶಯವೇ ಇರಲಿಲ್ಲ. ಸಮಯ ಸರಿದಂತೆ ಅದು ಮತ್ತೂ ಹೆಚ್ಚಾಗತೊಡಗಿತು. ನಾನೂ ಕೂಡ ಈ ಮೊದಲೇ ತಿಳಿಸಿದಂತೆ ಬಹು ಬೇಗ ಆತಂಕಗೊಳ್ಳುವವನೇ. ಅಲ್ಲದೇ, ಸರಿ ರಾತ್ರಿಯ ನೀರವ ಮೌನದ ಈ ಹೊತ್ತಿನಲ್ಲಿ ಈ ವಿಲಕ್ಷಣ ಟಿಕ್ ಟಕ್ ಶಬ್ದ ನನ್ನನ್ನು ಮತ್ತಷ್ಟು ಆತಂಕಕ್ಕೀಡುಮಾಡಿತು. ಆದರೂ ನಾನು ಕೆಲ ಸಮಯ ಕದಲದೆ ಸುಮ್ಮನೆ ನಿಂತುಕೊಂಡೇ ಇದ್ದೆ. ಶಬ್ದ ಮತ್ತೂ ಹೆಚ್ಚಾಗತೊಡಗಿತು. ಮುದುಕನ ಹೃದಯ ಒಡೆದೇ ಹೋಗುವುದೇನೋ ಎಂದು ನಾನು ದಿಗಿಲುಗೊಂಡೆ. ಹೊಸ ಆತಂಕ ನನ್ನನ್ನು ಕಾಡತೊಡಗಿತು. ಒಂದು ವೇಳೆ ಈ ಶಬ್ದ ನೆರೆಮನೆಯವರಿಗೆ ಕೇಳಿಸಿದರೆ? ಮುದುಕನ ಸಮಯ ಸನ್ನಿಹಿತವಾಗಿತ್ತು. ಲಾಟೀನಿಗೆ ಮುಚ್ಚಿದ ಮುಸುಕನ್ನು ಕಿತ್ತೆಸೆದು, ಜೋರಾಗಿ ಫೂತ್ಕರಿಸುತ್ತಾ ನಾನು ಮುದುಕನೆಡೆಗೆ ನುಗ್ಗಿದೆ. ಮುದುಕ